ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಆಯವ್ಯಯ/ಅಉಸ/ಅ.ಬಿ/16/2022 -23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ: 17.06.2022.

## ಕಾರಣ ಕೇಳುವ ನೋಟಿಸ್

ವಿಷಯ: 2021-22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡು ಕರ್ತವ್ಯನಿರ್ವಹಿಸಿರುವ ಅತಿಥಿಉಪನ್ಯಾಸಕರುಗಳಿಗೆ ಗೌರವಧನ ಪಾವತಿಗೆ ಬಿಡುಗಡೆ ಮಾಡಲಾದ ಅನುದಾನವನ್ನು ಬಳಕೆ ಮಾಡದಿರುವ ಕುರಿತು.

ಉಲ್ಲೇಖ:
1. ಈ ಕಛೇರಿಯ ಸಮಸಂಖ್ಯೆಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ :ಕಾಶಿಇ/ ಆಯವ್ಯಯ / ಅ.ಉ.ಗೌ/ಅ.ಬಿ/04/2021-22.ದಿನಾಂಕ:07.03.2022. 15.03.2022. 16.03.2022 27.03.2022 ಮತ್ತು 28.03.2022
2. ಸಂಖ್ಯೆ:ಮಮವಿಕಾ:ಮೈ/52/2022-23.ದಿನಾಂಕ:11.04.2022.
3. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರ ದಿನಾಂಕ:04.05.2022
4. ಸಂಖ್ಯೆ:ಮಮವಿಕಬೆಂ/27/2021-22.ದಿನಾಂಕ:25.04.2022.
5. ಸಂಖ್ಯೆ:ಸಪ್ರದಕಾಕೆಂ/ಕೊರತೆಅನುದಾನ/2022-23. ದಿನಾಂಕ:14.05.2022.
6. ಸಂಖ್ಯೆ:ಸವಿಕಾಬೆಂ/582/2021-22.ದಿನಾಂಕ:30.03.2022.
7. ಸಂಖ್ಯೆ:ಮಮಕಕಾಬೆಂ/617/2022-23.ದಿನಾಂಕ:26.04.2022.
8. ಸಂಖ್ಯೆ:ಸಪ್ರದಕಾಹಾ/ಅಉನೇ/2022-23.ದಿನಾಂಕ:29.04.2022.
9. ಸಂಖ್ಯೆ:ಸಪ್ರದಕಾಮು/ಅಉಗೌ/10/2022-23.ದಿನಾಂಕ:24.04.2022.
10. ಸಂಖ್ಯೆ:ಸಪ್ರದಕಾ/ರಾಯಚೂರು/2022-23.ದಿನಾಂಕ:19.05.2022.
11. ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳಿಂದ ವಿವಿಧ ದಿನಾಂಕಗಳಂದು ಸಲ್ಲಿಸಿರುವ ಮನವಿ ಪತ್ರಗಳು.

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಉಲ್ಲೇಖ(1)ರ ಅನುದಾನ ಬಿಡುಗಡೆ ಆದೇಶದಲ್ಲಿ ಫೆಬ್ರವರಿ-2022 ಹಾಗೂ ಹಿಂದಿನ ಮಾಹೆಗಳ ಬಾಕಿ ಇದ್ದ ಅವಧಿಯ ಗೌರವಧನ ಪಾವತಿಸಲು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರ ಬೇಡಿಕೆ ಮತ್ತು ಇ.ಎಂ.ಐ.ಎಸ್ ವರದಿ ಆಧಾರಿಸಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನ ಬಿಡುಗಡೆ ಆದೇಶದಲ್ಲಿ ಅನುದಾನವನ್ನು ನಿಗಧಿತ ದಿನಾಂಕದೊಳಗೆ ಬಳಸಿಕೊಂಡು ಬಳಕೆ ಪ್ರಮಾಣಪತ್ರವನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಬಿಡುಗಡೆ ಮಾಡಿರುವ ಅನುದಾನದಲ್ಲಿ ಉಳಿಕೆ ಕಂಡುಬಂದಲ್ಲಿ ಸದರಿ ಅನುದಾನವನ್ನು ಮಾರ್ಚ್-2022ರ ಮಾಹೆಯ 15 ದಿನಗಳಿಗೆ ಬಳಸಿಕೊಳ್ಳಲು ಸೂಚಿಸಲಾಗಿತ್ತು. ತಪ್ಪಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರುಗಳ ವಿರುದ್ಧ ಸೂಕ್ತ ಕ್ರಮವಹಿಸಲಾಗುವುದು ಎಂದು ತಿಳಿಸಲಾಗಿರುತ್ತದೆ.

ಮುಂದುವರೆದು ಖಜಾನೆ-2 ವರದಿಯನ್ನು ಪರಿಶೀಲಿಸಿದ್ದು, ನೀವು 2021-22ನೇ ಸಾಲಿಗೆ ಅತಿಥಿ ಉಪನ್ಯಾಸಕರ ಗೌರವಧನ ಪಾವತಿಗಾಗಿ ಬಿಡುಗಡೆ ಮಾಡಿದ್ದ ಅನುದಾನವನ್ನು ಬಳಕೆ ಮಾಡದೇ ವ್ಯಪಗತ ಮಾಡಿರುವುದು ಕಂಡು ಬಂದಿರುತ್ತದೆ. ಹಾಗೂ ಪ್ರಸ್ತುತ ಫೆಬ್ರವರಿ-2022ರ ಹಾಗೂ ಹಿಂದಿನ ಮಾಹೆಗಳಿಗೆ ಗೌರವಧನವನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿರುತ್ತೀರಿ ಹಲವು ಅತಿಥಿ ಉಪನ್ಯಾಸಕರುಗಳು ಗೌರವಧನ ಪಾವತಿಯಾಗದ ಬಗ್ಗೆ ಈ ಕಛೇರಿಗೆ ದೂರು ಸಲ್ಲಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

---2

ನೀವು ಜವಾಬ್ದಾರಿಯುತ ಪ್ರಾಂಶುಪಾಲರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಭಾಗಶ: ಬಳಕೆ ಮಾಡಿ, ಉಳಿಕೆ ಅನುದಾನ ವ್ಯಪಗತವಾಗಲು ಕಾರಣರಾಗಿರುತ್ತೀರಿ ಹಾಗೂ ಈ ಸಂಬಂಧ ಈ ಕಛೇರಿಗೆ ಯಾವುದೇ ಮಾಹಿತಿಸಲ್ಲಿಸದೇ ಕರ್ತವ್ಯ ಲೋಪವೆಸಗಿರುವುದು ಕಂಡುಬಂದಿದ್ದು, ಇದು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 1996ರ ನಿಯಮ 3(1)ರ (1),(2) &(3)ನ್ನು ಉಲ್ಲಂಘಿಸಲಾಗಿರುತ್ತದೆ. ಆದುದರಿಂದ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 1957ರ(ವರ್ಗೀಕರಣ,ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳಡಿಯಲ್ಲಿ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂಬುದಕ್ಕೆ ಈ ನೋಟಿಸ್ ತಲುಪಿದ 07 ದಿನಗಳೊಳಗಾಗಿ ಸೂಕ್ತ ಸಮಜಾಯಿಸಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ವಿವರಣೆ ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಇ-ಆಫೀಸ್ ಮೂಲಕ ಅನುಮೋದಿಸಲ್ಪಟ್ಟಿದೆ.)

5-13.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ :

1) ಶ್ರೀ ಬಾಲಕೃಷ್ಣ ಎಂ. ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು
2) ಶ್ರೀಮತಿ.ನಾಗರತ್ನ . ಟಿ.ಆರ್, ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು.
3) ಡಾ|| ಉಮೇಶ್.ಕೆ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರಸಿಂಹರಾಜಪುರ.
4) ಡಾ|| ರಾಮಲಿಂಗಪ್ಪ.ಟಿ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆಂಗೇರಿ.
5) ಡಾ|| ಯಂಕಣ್ಣ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ರಾಯಚೂರು.
6) ಡಾ|| ಮಹಂತ್‌ಗೌಡ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಲಿಂಗಸೂಗೂರು.
7) ಡಾ|| ಕೆ.ರಾಮಕೃಷ್ಣರೆಡ್ಡಿ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ,ಬೆಂಗಳೂರು.
8) ಡಾ|| ಪ್ರಕಾಶ್.ಹೆಚ್. ಪ್ರಾಂಶುಪಾಲರು, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು.
9) ಡಾ|| ವಿ.ಎಂ.ಕುಮ್ಮೂರ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಹಾವೇರಿ.
10) ಶ್ರೀ.ಚಂದ್ರನಾಯ್ಕ.ಎಂ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಹರಪನಹಳ್ಳಿ.
11) ಶ್ರೀ.ವೆಂಕೋಬ ಬಿರಾದರ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಸುರಪುರ.
12) ಶ್ರೀ.ಡಾ|| ರಾಗಿಣಿ.ಎನ್. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಕುವೆಂಪುನಗರ,ಮೈಸೂರು.
13) ಶ್ರೀ.ಗೌಡಪ್ಪ.ಎಸ್.ಮಾಲಿಪಾಟೀಲ್. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಕಾಳಗಿ.
14) ಶ್ರೀ.ಎ.ಕೆ.ಜಮಾದಾರ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ,ಮುಳಗುಂದ.

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ),ಬಹುಮಹಡಿ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು-ಮಾಹಿತಿ ಮತ್ತು ಆಗತ್ಯ ಕ್ರಮಕ್ಕಾಗಿ.
3. ಮ್ಯಾನೇಜರ್/ ಅಧೀಕ್ಷಕರು ಕಾಲೇಜು ಶಿಕ್ಷಣ ಇಲಾಖೆ ಕೇಂದ್ರ ಕಛೇರಿ, ತನಿಖಾ ವಿಭಾಗ, ಬೆಂಗಳೂರು- ಮಾಹಿತಿಗಾಗಿ
4. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.